# 0102/0324

**I Semester 3 Year LL.B./III Semester 5 Year B.A. LL.B./B.B.A. LL.B.**
**Examination, December 2015**
**CONSTITUTIONAL LAW**

Duration : 3 Hours                                                  Max. Marks : 100

**Instructions**: 1. Answer Q. No. **9** and **any five** of the remaining questions.

2. Q. No. **9** carries **20** marks and the remaining questions carry **16** marks **each**.

3. Answers should be written either in **English** or in **Kannada** **completely**.

Q. No. 1. Discuss the values enshrined in the preamble of the constitution of India. Is the preamble a part of the constitution ? Marks : 16

ಭಾರತದ ಸಂವಿಧಾನದ ಪೀಠಿಕೆಯಲ್ಲಿ ಅಳವಡಿಸಲಾದ ಮೌಲ್ಯಗಳನ್ನು ಚರ್ಚಿಸಿ. ಪೀಠಿಕೆಯು ಸಂವಿಧಾನದ ಒಂದು ಭಾಗವೇ ?

Q. No. 2. "The State shall not deny any citizen equality before law or the equal protection of the laws". Discuss by referring to judicial decisions. Marks : 16

''ರಾಜ್ಯವು ಯಾವುದೇ ವ್ಯಕ್ತಿಗೆ ಕಾನೂನಿನ ಮುಂದೆ ಸಮಾನತೆ ಅಥವಾ ಕಾನೂನುಗಳಿಂದ ಸಮಾನ ಸಂರಕ್ಷಣೆಯನ್ನು ನಿರಾಕರಿಸಬಾರದು''. ಈ ಹೇಳಿಕೆಯನ್ನು ನ್ಯಾಯಿಕ ನಿರ್ಣಯಗಳೊಂದಿಗೆ ಚರ್ಚಿಸಿ.

Q. No. 3. The expression 'Life' and 'Personal Liberty' under Article 21 of the Indian Constitution are of widest amplitude and cover infinite volume of rights' – Elucidate. Marks : 16

ಭಾರತದ ಸಂವಿಧಾನದ ಅನುಚ್ಛೇದ 21 ರ ಅಡಿಯಲ್ಲಿ 'ಜೀವ' ಮತ್ತು 'ವೈಯಕ್ತಿಕ ಸ್ವಾತಂತ್ರ್ಯ' ಎಂಬ ಪದ ವಿನ್ಯಾಸ ಬಹು ವಿಸ್ತಾರವಾದವುಗಳು ಮತ್ತು ಕೊನೆಯಿಲ್ಲದ ವೈವಿಧ್ಯ ಹಕ್ಕುಗಳನ್ನು ಒಳಗೊಂಡಿರುತ್ತದೆ. ವಿಷದೀಕರಿಸಿ.

Q. No. 4. Discuss the importance of Directive Principles of State Policy. Explain its relation to Fundamental Rights. Marks : 16

ರಾಜ್ಯ ನೀತಿಯ ನಿರ್ದೇಶನಾತ್ಮಕ ತತ್ವಗಳ ಮಹತ್ವವನ್ನು ಚರ್ಚಿಸಿರಿ. ಮೂಲಭೂತ ಹಕ್ಕುಗಳೊಂದಿಗೆ ಇರುವ ಇವುಗಳ ಸಂಬಂಧವನ್ನು ವಿವರಿಸಿ.

Q. No. 5. Explain the scheme of distribution of legislative powers between the Union and the State. Marks : 16

ಕೇಂದ್ರ ಮತ್ತು ರಾಜ್ಯಗಳ ನಡುವೆ ಶಾಸನೀಯ ಅಧಿಕಾರಗಳ ವಿಂಗಡನೆಯ ಯೋಜನೆಯನ್ನು ವಿವರಿಸಿರಿ.

Q. No. 6. Explain the constitutional safeguards provided for a person in the service of the Union or the States. Marks : 16

ಕೇಂದ್ರ ಅಥವಾ ರಾಜ್ಯಗಳ ಸೇವೆಯಲ್ಲಿರುವ ವ್ಯಕ್ತಿಗಳಿಗೆ ಸಂವಿಧಾನದಲ್ಲಿ ಇರುವ ರಕ್ಷಣೆಗಳನ್ನು ವಿವರಿಸಿ.

Q. No. 7. Examine the scope of the 'amending provision' in the constitution with the help of decided cases. Marks : 16

ಸಂವಿಧಾನದ 'ತಿದ್ದುಪಡಿ ಅನುಚ್ಛೇದ'ದ ವ್ಯಾಪ್ತಿಯನ್ನು ನಿರ್ಧರಿತ ಪ್ರಕರಣಗಳೊಂದಿಗೆ ಪರೀಕ್ಷಿಸಿ.

Q. No. 8. Write short notes on **any two** of the following : Marks : 8×2=16

ಈ ಕೆಳಗಿನ ಯಾವುದಾದರೂ **ಎರಡರಲ್ಲಿ** ಟಿಪ್ಪಣಿ ಬರೆಯಿರಿ:

a) Advisory Jurisdiction.

ಸಲಹಾ ನ್ಯಾಯಾಧಿಕಾರ.

b) Money Bill and Ordinary Bill.

ವಿತ್ತೀಯ ವಿಧೇಯಕ ಮತ್ತು ಸಾಮಾನ್ಯ ವಿಧೇಯಕ.

c) State Emergency.

ರಾಜ್ಯದ ತುರ್ತು ಪರಿಸ್ಥಿತಿ.

Q. No. 9. Solve **any two** of the following problems : Marks : 10×2=20

ಈ ಕೆಳಗಿನ ಯಾವುದಾದರೂ **ಎರಡು** ಸಮಸ್ಯೆಗಳನ್ನು ತೀರ್ಮಾನಿಸಿ :

a) The non-gazetted employees formed the Karmachari Sangh. This association was recognized in 1966. It consisted of all the non-gazetted employees though they belonged to different cadres. The rules regulating to the association were amended in 1970. Under the Amended rules only employees of the same rank/cadre can be members of an association. The Government accordingly derecognized the association. The association challenged the Government action of derecognition. Decide.

ಗಜೆಟೆಡ್ ಅಧಿಕಾರಿ ವರ್ಗಕ್ಕೆ ಸೇರದ ಸರ್ಕಾರಿ ನೌಕರರು ಕರ್ಮಚಾರಿ ಸಂಘವನ್ನು ರಚಿಸಿದರು. ಈ ಒಕ್ಕೂಟವನ್ನು 1966 ರಲ್ಲಿ ಮಾನ್ಯಮಾಡಲಾಯಿತು. ಒಕ್ಕೂಟದಲ್ಲಿ ಗಜೆಟೆಡ್ ಅಧಿಕಾರಿಗಳಲ್ಲದವರು ಬೇರೆ ಬೇರೆ ಶ್ರೇಣಿಯಲ್ಲಿದ್ದರೂ ಎಲ್ಲರೂ ಸೇರಿದ್ದರು. 1970 ರಲ್ಲಿ ಒಕ್ಕೂಟಕ್ಕೆ ಸಂಬಂಧಿಸಿದ ನಿಯಾಮಾವಳಿಗಳನ್ನು ತಿದ್ದುಪಡಿ ಮಾಡಲಾಗಿ ಅದರ ಪ್ರಕಾರ ಕೇವಲ ಒಂದೇ ವರ್ಗದಲ್ಲಿ ಇರುವ ನೌಕರರು ಮಾತ್ರ ಒಕ್ಕೂಟದ ಸದಸ್ಯರಾಗಬಹುದು ಎಂಬಂತೆ ತಿದ್ದುಪಡಿ ತರಲಾಯಿತು. ಈ ತಿದ್ದುಪಡಿಯಿಂದಾಗಿ ಮಾನ್ಯತೆ ಪಡೆದಿರುವ ಕರ್ಮಚಾರಿ ಸಂಘವನ್ನು ಅಮಾನ್ಯಮಾಡಿ ಸರ್ಕಾರವು ಆದೇಶ ಹೊರಡಿಸಿತು. ಈ ಆದೇಶವನ್ನು ಕರ್ಮಚಾರಿ ಒಕ್ಕೂಟವು ಪ್ರಶ್ನಿಸುತ್ತದೆ. ತೀರ್ಮಾನಿಸಿ.

b) The Government of Tamil Nadu issued an order for listing of backward classes. It exempted such families therefrom having an annual income of Rs. 30,000 or above. A member of backward class included in the list was not given admission in the state medical college. He challenged the Government order. Decide.

ತಮಿಳುನಾಡು ಸರಕಾರವು ಒಂದು ಆದೇಶದ ಮೂಲಕ ಹಿಂದುಳಿದ ವರ್ಗಗಳ ಪಟ್ಟಿಯನ್ನು ಹೊರಡಿಸುತ್ತದೆ. ಹಿಂದುಳಿದ ವರ್ಗಗಳಲ್ಲಿನ ಕುಟುಂಬಗಳ ವಾರ್ಷಿಕ ವರಮಾನ ರೂ. 30,000/- ಅಥವಾ ಅದಕ್ಕಿಂತ ಮಿಗಿಲಾದ ವರಮಾನ ಹೊಂದಿರುವ ಕುಟುಂಬಗಳನ್ನು ಈ ಆದೇಶವು ತನ್ನ ವ್ಯಾಪ್ತಿಯ ಹೊರಗೆ ಇಟ್ಟಿರುತ್ತದೆ. ಹಿಂದುಳಿದ ವರ್ಗದ ಒಬ್ಬ ಸದಸ್ಯನು ಈ ಕಾರಣಕ್ಕಾಗಿ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಪ್ರವೇಶ ಪಡೆಯಲು ವಿಫಲನಾಗುತ್ತಾನೆ. ಅವರು ಈ ಸರ್ಕಾರಿ ಆದೇಶವನ್ನು ಮೂಲಭೂತ ಹಕ್ಕಿನ ಉಲ್ಲಂಘನೆಯ ಆಧಾರದಲ್ಲಿ ಪ್ರಶ್ನಿಸುತ್ತಾನೆ. ತೀರ್ಮಾನಿಸಿ.

c) A was the bidder at an auction conducted by the divisional forest officer in respect of certain forest contracts. He was successful bidder and signed the bid-sheet. Prior to the auction he signed the declaration that if the successful bidder did not deposit in time the amount of bid, the forest contract could be reauctioned and the deficiency on the second auction could be recovered from him. Since A did not deposit that amount, there was reauction and he was sued for the deficiency on the reauction. Decide.

ಪ್ರಾಂತೀಯ (ವಿಭಾಗೀಯ) ಅರಣ್ಯ ಅಧಿಕಾರಿಯು ಅರಣ್ಯ ಇಲಾಖೆಗೆ ಸಂಬಂಧಿಸಿದ ವಿವಿಧ ಯೋಜನೆಗಳ ಕರಾರು ಹಂಚಿಕೆಗಾಗಿ ಹರಾಜು ಪ್ರಕ್ರಿಯೆ ನಡೆಸುತ್ತಾರೆ. 'A' ಎಂಬುವನು ಈ ಪ್ರಕ್ರಿಯೆಯಲ್ಲಿ ಭಾಗವಹಿಸಿ ಯಶಸ್ವಿಯಾಗಿ ಹರಾಜು ಒಪ್ಪಂದವನ್ನು ತನ್ನದಾಗಿಸಿಕೊಳ್ಳುತ್ತಾನೆ ಹಾಗೂ ಹರಾಜು ಪತ್ರವನ್ನು ಸಹಿ ಮಾಡುತ್ತಾನೆ. ಈ ಹರಾಜು ಪ್ರಕ್ರಿಯೆ ಮುನ್ನ ಒಂದು ಘೋಷಣಾ ಪತ್ರವನ್ನು ಸಹಿಮಾಡಿ ಯಶಸ್ವಿ ಬಿಡ್ಡರನು ನಿಗದಿತ ಸಮಯದಲ್ಲಿ ಹರಾಜು ಮೊತ್ತವನ್ನು ಪಾವತಿಸದಿದ್ದಲ್ಲಿ ಈ ಕರಾರನ್ನು ಮರು ಹರಾಜು ಮಾಡಲಾಗುವುದೆಂದು ತೀರ್ಮಾನಿಸುತ್ತದೆ. ಮರು ಹರಾಜು ಸಂದರ್ಭದಲ್ಲಿ ಹರಾಜು ಪ್ರಕ್ರಿಯೆಯು ಕಡಿಮೆ ಮೊತ್ತದಲ್ಲಿ ಹರಾಜು ಆಗಿದ್ದಲ್ಲಿ ಮೂಲ ಹರಾಜು ಮತ್ತು ಮರು ಹರಾಜು ಇವುಗಳ ನಡುವಿನ ವ್ಯತ್ಯಾಸದ ಮೊತ್ತವನ್ನು ಮೂಲ ಯಶಸ್ವಿ ಬಿಡ್ಡರ್‌ನಿಂದ ಪಡೆಯಬಹುದು ಎಂದು ಅರಣ್ಯ ಇಲಾಖೆ ಅಧಿಕಾರಿಯು ವಾದಿಸುತ್ತಾರೆ 'A' ನು ಈ ಶೇವಣಿಯನ್ನು ಪಾವತಿಸಲು ನಿರಾಕರಿಸುತ್ತಾನೆ. ಇದು ಸೇವಾ ವ್ಯತ್ಯಯ ಮತ್ತು ಕರಾರು ಉಲ್ಲಂಘನೆ ಎಂಬ ಕಾರಣದಲ್ಲಿ 'A' ನ ವಿರುದ್ಧ ದಾವೆ ಹೂಡಲಾಯಿತು. 'A' ನು ಭಾದ್ಯನೇ ? ನಿರ್ಧರಿಸಿ.